**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 30/2025**

**ಸಾಕ್ಷಿಯನ್ನು ದಿಃ 12.08.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ.MRH ವಕೀಲರಿಂದಃ**

ನಿಪಿ-3ರ ನೋಟೀಸ್ ಗೆ ಸಂಪೂರ್ಣ ಮಾಹಿತಿಯನ್ನು ನಮ್ಮ ಪತ್ನಿ ಸೀಮಾ ನೀಡಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸಲು ಕೂಡ ನನ್ನ ಪತ್ನಿ ಸೀಮಾ ವಕೀಲರಿಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಇಲ್ಲ. ನನ್ನ ಪತ್ನಿ ಸೀಮಾ ನೀಡಿದ ಮಾಹಿತಿಯ ಮೇರೆಗೆ ವಕೀಲರು ತಯಾರಿಸಿದ ದೂರಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿಯೇ ದೂರು ಮತ್ತು ನೋಟೀಸ್ ನಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಸರಿಯಾದ ಮಾಹಿತಿ ಇಲ್ಲದೇ ಇರುವ ಕಾರಣ ನೋಟೀಸ್ ಮತ್ತು ದೂರಿಗೆ ತದ್ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟೀಸ್ ನೀಡಲು ಮತ್ತು ಈ ದೂರನ್ನು ಸಲ್ಲಿಸಲು ನಾನು ಅನರ್ಹ ವ್ಯಕ್ತಿ ಎಂದರೆ ಸರಿಯಲ್ಲ. ಉತ್ತರದ ನೋಟೀಸ್ ನಲ್ಲಿ ಆರೋಪಿಯು ನನ್ನ ಪತ್ನಿ ಚೀಟಿ ವ್ಯವಹಾರ

ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಪ್ರತ್ಯುತ್ತರ ನೀಡಿದ್ದಾರೆ ಎಂದು ವಕೀಲರಿಗೆ ಹೇಳಿದ್ದೇನೆ. ಅದರ ನಕಲನ್ನು ವಕೀಲರಿಗೆ ಕೊಟ್ಟಿದ್ದೇನೆ. ನನ್ನಪತ್ನಿ ಸೀಮಾ ಸುಂದರಣ್ಣನ ತೋಟ ಹುಣಸೂರಿನಲ್ಲಿ ವಾಸವಿದ್ದಾರೆ. ಸದರಿ ವಿಳಾಸ ಸರಿಯಾಗಿದೆ. ನಾನು ಅಲ್ಲಿಯೇ ನನ್ನ ಪತ್ನಿಯ ಜೊತೆ ವಾಸವಿದ್ದೇನೆ. ಅಲ್ಲಿ ಇದ್ದಾಗ ಆರೋಪಿಗೂ ನನ್ನ ಪತ್ನಿಗೂ ಹಣಕಾಸಿನ ವ್ಯವಹಾರ ನಡೆದಿದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಅವರಿಬ್ಬರ ನಡುವೆ ಎಷ್ಟು ಹಣಕಾಸಿನ ವ್ಯವಹಾರ ನಡೆದಿದೆ ಎಂದು ಗೊತ್ತಿಲ್ಲ. ಸದರಿ ಹಣಕಾಸಿನ ವ್ಯವಹಾರದಲ್ಲಿ ಯಾರು ಯಾರಿಗೆ ಹಣ ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ನನ್ನ ಪತ್ನಿ ಆರೋಪಿಗೆ ಸಾಲ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಸಾಲದ ವ್ಯವಹಾರದ ಸಮಯದಲ್ಲಿ ನನ್ನ ಪತ್ನಿ ಆರೋಪಿಯಿಂದ ನಿಪಿ-1ರ ಚೆಕ್ಕನ್ನು ಭದ್ರತೆಗಾಗಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಪತ್ನಿಯಿಂದ ಪಡೆದುಕೊಂಡ ಸಾಲದ ಹಣವನ್ನು ಆರೋಪಿ ಸಂಪೂರ್ಣವಾಗಿ ಮರುಪಾವತಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಹಣವನ್ನು ಆರೋಪಿ ನನ್ನ ಪತ್ನಿಯ ಫೋನ್ ಪೇ ಖಾತೆಗೆ ರೂ. 1,90,000/- ರೂ. 1,00,000/- ಎರಡು ಬಾರಿ ತಲಾ ರೂ.50,000/- ದಂತೆ ಪಾವತಿಸಿದ್ದಾರೆ ಎಂದರೆ ಗೊತ್ತಿಲ್ಲ. ಆ ರೀತಿ ಸಾಲ ಮರುಪಾವತಿಸಿದ್ದರೂ ಸಹ ಆರೋಪಿ ನನ್ನ ಪತ್ನಿಗೆ ಭದ್ರತೆಗಾಗಿ ನೀಡಿದ ಚೆಕ್ಕನ್ನು ನನ್ನ ಪತ್ನಿ ವಾಪಸ್ಸು ಕೊಡಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ನನಗೂ ಯಾವುದೇ ಸಾಲದ ವ್ಯವಹಾರ ನಡೆಯದೇ ಇದ್ದರೂ ಕೂಡ ಅನ್ಯತಾ ಫಾಯಿದೆ ಪಡೆಯಲು ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣವನ್ನು ನನ್ನ ಮೂಲಕ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನನಗೂ ಆರೋಪಿಗೂ ಹಣಕಾಸಿನ ವ್ಯವಹಾರ ಇಲ್ಲ. ನಿಪಿ-1ರ ಚೆಕ್ಕನ್ನು ಆರೋಪಿ ನನಗೆ ನೇರವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನೇ ಅವರಿಗೆ ಹಣ ಕೊಟ್ಟು ಅವರು ಚೆಕ್ಕನ್ನು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಾನೇ ಹಣ ಕೊಟ್ಟಿದ್ದಲ್ಲಿ ನನಗೆ ನಿಖರವಾದ ತಾರೀಖು, ತಿಂಗಳು ಗೊತ್ತಿರುತ್ತಿತ್ತು ಎಂದರೆ ಸರಿ. 2024, 7ನೇ ತಿಂಗಳಲ್ಲಿ ಕೊಟ್ಟಿದ್ದೇನೆ. ಸದರಿ ತಾರೀಖಿನ ವಿಚಾರವನ್ನು ವಕೀಲರಿಗೆ ಹೇಳಿದ್ದೇನೆ. ದೂರಿನಲ್ಲಿ ನಿಖರವಾದ ತಾರೀಖು ಇಲ್ಲ ಎಂದರೆ ಸರಿ. ಸಾಕ್ಷಿ ಮರೆತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ದೂರಿನ ಪ್ಯಾರಾ-2ರಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇರುವ ಕಾರಣ ನನ್ನ ಫಿರ್ಯಾದಿನ ಪ್ಯಾರಾ ನಂ.3 ರಲ್ಲಿ ಹೇಳಿರುವ 3 ತಿಂಗಳ ನಂತರ ಚೆಕ್ಕನ್ನು ಕೊಟ್ಟಿದ್ದಾರೆ ಎಂದು ಹೇಳುವ

ವಿಚಾರ ನನಗೆ ಗೊತ್ತಿಲ್ಲ ಎಂದರೆ ಗೊತ್ತಿದೆ. ಸಾಕ್ಷಿ ಮುಂದುವರಿದು 3 ತಿಂಗಳ ನಂತರ ಹಾಜರುಪಡಿಸಿ ಎಂದು ಹೇಳಿ ಚೆಕ್ಕು ಕೊಟ್ಟಿದ್ದಾರೆ. ನನ್ನ ಪತ್ನಿ ನನ್ನ ಹೆಸರಿನಲ್ಲಿ ನೋಟೀಸ್ ಜಾರಿ ಮಾಡಿರುವುದರಿಂದ ನೋಟೀಸ್‌ನಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ಹಾಜರುಪಡಿಸಿ ಅದು ಅಮಾನ್ಯಗೊಂಡಿದೆ ಎಂಬ ವಿಚಾರ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಗೊತ್ತಿದೆ. ನಾನು ನೀಡಿದ ಸುಳ್ಳು ನೋಟೀಸ್‌ಗೆ ಆರೋಪಿ ಪ್ರತ್ಯುತ್ತರ ನೀಡಿದ್ದಾರೆ ಎಂದರೆ ಸರಿಯಲ್ಲ. ರೂ. 480000/- ಸಾಲ ಕೊಡುವಷ್ಟು ಆರ್ಥಿಕ ಶಕ್ತಿ ನನಗೆ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಪತ್ನಿ ಸೇರಿ ಅನ್ಯತಾ ಫಾಯಿದೆ ಪಡೆಯಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.